3. ಅಧ್ಯಕ್ಷರ ಅಪ್ಪಣೆ ಮೇರೆಗೆ

ಕಾಡುಗಳ್ಳ ವೀರಪ್ಪನ್ ಸರ್ಕಾರಕ್ಕೆ ಸರೆಂಡರ್ ಆಗುವ ವಿಚಾರದಲ್ಲಿ ಸರ್ಕಾರದ ಹೇಳಿಕೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ಒಂದು ಮಹತ್ವದ ವಿಚಾರದ ಬಗ್ಗೆ ಒಂದು ಹೇಳಿಕೆಯನ್ನು ಇವತ್ತು ಸಂಜೆಯೊಳಗೆ ಸರ್ಕಾರದಿಂದ ಕೊಡಿಸಬೇಕಾಗುತ್ತದೆ, ಏಕೆಂದರೆ, ಅದು ಇವತ್ತು ಪತ್ರಿಕೆಗಳಲ್ಲಿಯು ಪ್ರಕಟವಾಗಿದೆ. ವೀರಪ್ಪನ್ ಇವತ್ತು ಸಂಜೆಯೊಳಗೆ ಸರ್ಕಾರಕ್ಕೆ ಸರೆಂಡರ್ ಆಗುತ್ತಾನೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ ಮತ್ತೆ ನಮ್ಮ ಪೋಲೀಸ್‌ನವರು ಕೆಲವರನ್ನು ಅರೆಸ್ಟ್ ಮಾಡಿದ್ದಾರೆ, ಅವರನ್ನು ಇಂಟರೊಗೇಟ್ ಮಾಡಿದ್ದಾರೆಂಬುವ ವಿಚಾರ ಬಂದಿದೆ. ಅದಕ್ಕೆ ಇವತ್ತು ಸಂಜೆಯೊಳಗೆ ಮಾನ್ಯ ಗೃಹ ಸಚಿವರು, ರಾಜ್ಯದಲ್ಲಿ ಇದಕ್ಕೆ ಸಂಬಂಧಿಸಿದಂತೆ ಏನು ನಡೆಯುತ್ತಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಬೇಕು ಎಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಗೀರ್ ಅಹಮದ್‌ರವರೆ, ಈ ವಿಚಾರವನ್ನು ಸರ್ಕಾರಕ್ಕೆ ತಿಳಿಸಿ. ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ ಎರಡು ಗಂಟೆ ಎರಡು ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು: ತಮಗೆ ನಾಳೆ ಅವಕಾಶ ಕೊಡುತ್ತೇನೆ. ಇವತ್ತು ಸಮಯದ ಅಭಾವ ಇದೆ. ಜೊತೆಗೆ ಸರ್ಕಾರದಿಂದ ಉತ್ತರ ಬರಬೇಕಾಗಿದೆ. ಉತ್ತರ ಬರದೆ ತಾವು ಮೆನ್‌ಷನ್ ಮಾಡುವುದಿದ್ದರೆ ಮಾಡಿ. ನಾನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. ಅಲ್ಲಿಂದ ಉತ್ತರ ಬಂದರೆ ಒಳ್ಳೆಯದು.

ಶ್ರೀ ಬಿ.ಎನ್.ಬಚ್ಚೇಗೌಡ: ಆಗಬಹುದು. ನಾಳೆ ಮೂವ್ ಮಾಡುತ್ತೇನೆ.